KARN220019112023

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ. ಚನ್ನಪಟ್ಟಣ.</u>**

**ಉಪಸ್ಥಿತರು: ಶ್ರೀ ಮಹೇಂದ್ರ ಎಂ.,** ಬಿ.ಎ ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**<u>ದಿನಾಂಕಃ 16 ನೇ ಆಗಸ್ಟ್-2023</u>**

**<u>ಓ.ಎಸ್.ನಂ.165/2023</u>**

<u>ವಾದಿ</u> ಃ ಶ್ರೀಮತಿ.ಗುರುವಮ್ಮ

-ವಿರುದ್ಧ-

<u>ಪ್ರತಿವಾದಿಗಳು</u> ಃ ಶ್ರೀ.ರಾಮು ಮತ್ತು ಇತರರು

<u>ಮಧ್ಯಂತರ ಅರ್ಜಿ ಸಂಖ್ಯೆಃI</u>

<u>ವಾದಿ/ಅರ್ಜಿದಾರರು</u> ಃ ಶ್ರೀಮತಿ.ಗುರುವಮ್ಮ,
ಕೋಂ ಲೇಟ್ ಚೆಲುವಯ್ಯ,
ವಯಸ್ಸುಃ74 ವರ್ಷ,

ವಾಸಃ ಹುಣಸನಹಳ್ಳಿ ಗ್ರಾಮ,
ವಿರೂಪಾಕ್ಷಿಪುರ ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

(ಪ್ರತಿನಿಧಿಸುವವರು ಶ್ರೀ.ಪಿ.ಎಲ್.ಎನ್., ವಕೀಲರು)

-ವಿರುದ್ಧ-

<u>ಪ್ರತಿವಾದಿಗಳು/ ಎದುರುದಾರರು</u>

1. ಶ್ರೀ.ರಾಮು,
ಬಿನ್ ಲೇಟ್ ಮರಿಗೌಡ,
ವಯಸ್ಸುಃ 60 ವರ್ಷ,

2. ಶ್ರೀ.ತಮ್ಮಣ್ಣ,
ಬಿನ್ ಲೇಟ್ ಚಿಕ್ಕೆದೇಗೌಡ,
ವಯಸ್ಸು 75 ವರ್ಷಗಳು,

KARN220019112023

3. ಶ್ರೀ.ಗುರುವಯ್ಯ,
ಬಿನ್ ಲೇಟ್ ಚಿಟ್ಟೆ ಸಿದ್ದೇಗೌಡ,
ವಯಸ್ಸು 66 ವರ್ಷಗಳು,

4. ಶ್ರೀ.ಕುಮಾರ,
ಬಿನ್ ಲೇಟ್ ಚಿಕ್ಕಸ್ವಾಮಿ,
ವಯಸ್ಸು 30 ವರ್ಷಗಳು,

ಎಲ್ಲರ ವಾಸಃ ಕಾಲಿಕೆರೆ ಗ್ರಾಮ,
ವಿರೂಪಾಕ್ಷಿಪುರ ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

(ಪ್ರತಿನಿಧಿಸುವವರು ಪ್ರತಿವಾದಿ **1** ಮತ್ತು **3** ರವರ ಪರವಾಗಿ ಶ್ರೀ.ಎಂ.ಕೆ.ಎನ್., ವಕೀಲರು **2** ನೇ ಪ್ರತಿವಾದಿ ಪರವಾಗಿ ಶ್ರೀ.ಸಿ.ಆರ್.ಎನ್., ವಕೀಲರು ಮತ್ತು **4** ನೇ ಪ್ರತಿವಾದಿಯ ಪರವಾಗಿ ಶ್ರೀ.ಸಿ.ಎಸ್.ಡಿ., ವಕೀಲರು)

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:1 ರ ಮೇಲಿನ ಆದೇಶಃ**

ವಾದಿಯು ಮಧ್ಯಂತರ ಅರ್ಜಿ ಸಂ.1 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ಸಲ್ಲಿಸಿ ಈ ದಾವೆ ಇತ್ಯರ್ಥವಾಗುವವರೆಗೆ ಪ್ರತಿವಾದಿಗಳಾಗಲೀ ಅಥವಾ ಬೇರೆ ಯಾರೇ ಆಗಲೀ ವಾದಿಯ ದಾವಾ ಸ್ವತ್ತಿನಲ್ಲಿ ದನದ ಕೊಟ್ಟಿಗೆ ನಿರ್ಮಾಣ ಮಾಡದಂತೆ ಮತ್ತು ವಾದಿಯ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ಹಸ್ತಕ್ಷೇಪ ಮಾಡದಂತೆ ನಿರ್ಭಂಧಿಸುವ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ.

2. **ವಾದಿಯ ಮಧ್ಯಂತರ ಅರ್ಜಿಯ ಪ್ರಮಾಣ ಪತ್ರದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿರುತ್ತದೆ.**

ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 3 ಎಕರೆ 5 ಗುಂಟೆ ಪೈಕಿ 1 ಎಕರೆ 5 ಗುಂಟೆ ಸ್ವತ್ತನ್ನು ದಿನಾಂಕಃ13.02.1975 ರಲ್ಲಿ ಆಧಾರ ಪತ್ರದ ಮೂಲಕ ವಾದಿಯು ಪಡೆದುಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ. ದಾವಾ ಸ್ವತ್ತಿನ ಖಾತೆಯು ವಾದಿಯ ಹೆಸರಿಗೆ ಇದ್ದು ವಾದಿಯು ದಾವಾ ಸ್ವತ್ತಿನಲ್ಲಿ ತೆಂಗಿನ ಫಸಲನ್ನು ಮಾಡಿದ್ದು, ವಾದಿಯು ತೆಂಗಿನ ಕಾಯಿ ಕೀಳುವ ಸಂಧರ್ಭದಲ್ಲಿ ಪ್ರತಿವಾದಿಗಳು ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ವಾದಿಯ

ಸ್ವಾಧೀನಾನುಭವಕ್ಕೆ ಹಸ್ತಕ್ಷೇಪ ಮಾಡಿ ಧನದ ಕೊಟ್ಟಿಗೆಯನ್ನು ನಿರ್ಮಾಣ ಮಾಡಲು ಪ್ರಯತ್ನ ಮಾಡುತ್ತಿದ್ದು ಆದ್ದರಿಂದ ವಾದಿಯು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ಆದ್ದರಿಂದ ಈ ಅರ್ಜಿಯನ್ನು ಸಲ್ಲಿಸಿದ್ದು ಪುರಸ್ಕರಿತಸಬೇಕಾಗಿ ಕೋರಿರುತ್ತಾರೆ.

3. ಪ್ರತಿವಾದಿ 1 ಮತ್ತು 3 ರವರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಇತರೆ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ 1 ಮತ್ತು 3 ನೇ ಪ್ರತಿವಾದಿಗಳು ಜ್ಞಾಪನವನ್ನು ಸಲ್ಲಿಸಿ ತಾವು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಮಧ್ಯಂತರ ಅರ್ಜಿ ಸಂಖ್ಯೆ1 ಕ್ಕೆ ತಕರಾರು ಎಂದು ಪರಿಗಣಿಸಬೇಕಾಗಿ ಕೋರಿರುತ್ತಾರೆ. ಆದ್ದರಿಂದ ಈ ನ್ಯಾಯಾಲಯವು 1 ಮತ್ತು 3 ನೇ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಪರಿಶೀಲಿಸಿರುತ್ತದೆ ಈ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ವಾದ ಪತ್ರದ ಸಂಗತಿಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾರೆ ಮತ್ತು ಮುಂದುವರೆದು ವಾದಿಯು ಈ ದಾವೆಯಲ್ಲಿ ಅಗತ್ಯ ಪಕ್ಷಗಾರರನ್ನು ಸೇರ್ಪಡೆ ಮಾಡಿಲ್ಲವೆಂದು ತಿಳಿಸಿರುತ್ತಾರೆ. ದಾವಾ ಸ್ವತ್ತು ಪ್ರತಿವಾದಿಗಳಿಗೆ ಪಿತ್ರಾರ್ಜಿತ ಸ್ವತ್ತಾಗಿದ್ದು 1 ನೇ ಪ್ರತಿವಾದಿಯ ತಂದೆ ಮರೀಗೌಡ ಮತ್ತು 3 ನೇ ಪ್ರತಿವಾದಿಯ ತಂದೆ ಚಿಟ್ಟೆ ಸಿದ್ದೇಗೌಡರವರು ದಾವಾ ಸ್ವತ್ತನ್ನು ವಾದಿಯ ತಂದೆ ಚಿಕ್ಕೈದೇಗೌಡ ಮತ್ತು ಅವರ ಮಕ್ಕಳಿಂದ 1974 ರಲ್ಲಿ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಮತ್ತು ಅದರಂತೆ ಖಾತೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ದನದ ಕೊಟ್ಟಿಗೆಯನ್ನು ನಿರ್ಮಾಣ ಮಾಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ತೆಂಗಿನ ಮರಗಳನ್ನು ಬೆಳೆಸಿರುತ್ತಾರೆ. ದಾವಾ ಸ್ವತ್ತಿಗೂ ವಾದಿಗೂ ಯಾವುದೇ ಸಂಬಂಧವಿರುವುದಿಲ್ಲ. ಪ್ರತಿವಾದಿ 1 ಮತ್ತು 3 ರವರ ತಂದೆಯು ಖರೀದಿ ಮಾಡಿದ ಅವಧಿಯಲ್ಲಿ ದಾವಾ ಸ್ವತ್ತಿನ ಸರ್ವೇ ನಂ.119/2 ಆಗಿದ್ದು ಅದರಲ್ಲಿ 29 ಗುಂಟೆಯನ್ನು ಖರೀದಿ ಮಾಡಿದ್ದು ನಂತರ ಅದು ಸರ್ವೇ ನಂ.119/1 ಆಗಿ ಬದಲಾವಣೆಯಾಗಿರುತ್ತದೆ. ವಾದಿಗೆ ಗ್ರಾಮಸ್ಥರು ಪಂಚಾಯಿತಿ ಮಾಡಿ ಬುದ್ಧಿವಾದ ಹೇಳಿದರೂ ಸಹ ವಾದಿಯು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. 1 ಮತ್ತು 3 ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ. ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

ಃಅಂಶಗಳುಃ

1. ಈ ದಾವೆಯನ್ನು ವಾದಿಯು ಮೇಲ್ನೋಟಕ್ಕೆ ತಮ್ಮ ಪರವಾಗಿ ಹೊಂದಿರುತ್ತಾರೆಯೇ?
2. ಅನುಕೂಲತೆಯ ಒಲವು ವಾದಿಯ ಪರವಾಗಿ ಇರುತ್ತದೆಯೇ?
3. ಒಂದು ವೇಳೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದರೆ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆಯೇ?
4. ಮಾಡುವ ಆದೇಶ ಏನು?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಕಡತಗಳಲ್ಲಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

ಅಂಶ ಸಂಖ್ಯೆ1 ಃ ನಕಾರಾತ್ಮಕವಾಗಿ
ಅಂಶ ಸಂಖ್ಯೆ2 ಃ ನಕಾರಾತ್ಮಕವಾಗಿ
ಅಂಶ ಸಂಖ್ಯೆ3 ಃ ನಕಾರಾತ್ಮಕವಾಗಿ
ಅಂಶ ಸಂಖ್ಯೆ4 ಃ ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,

ಕಾರಣಗಳು

7. ಅಂಶ ಸಂಖ್ಯೆ1 ರಿಂದ 3ಃ ಈ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ವಿಷಯಗಳು ಒಂದೇ ಆಗಿರುವುದರಿಂದ ಈ ಮೂರು ಅಂಶಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿರುತ್ತದೆ.

8. ವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿಯು ಆಧಾರ ಪತ್ರದ ಆಧಾರದ ಮೇಲೆ ದಾವಾ ಸ್ವತ್ತಿನ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿಗೆ ಅಪರಿಚಿತ ವ್ಯಕ್ತಿಗಳಾಗಿದ್ದು

ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ಕೊಟ್ಟಿಗೆಯನ್ನು ನಿರ್ಮಾಣ ಮಾಡಲು ಪ್ರಯತ್ನಿಸಿ ವಾದಿಯ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ಹಸ್ತಕ್ಷೇಪ ಮಾಡಿರುತ್ತಾರೆ. ಆ ಬಗ್ಗೆ ವಾದಿಯು ಪೂರಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಆದ್ದರಿಂದ ವಾದಿಯು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಾದಿಯು ಸಲ್ಲಿಸಿರುವ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

9. ಇದಕ್ಕೆ ವ್ಯತಿರಿಕ್ತವಾಗಿ ಪ್ರತಿವಾದಿ 1 ಮತ್ತು 3 ರವರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದಿಲ್ಲ. 1 ಮತ್ತು 3 ನೇ ಪ್ರತಿವಾದಿಗಳ ತಂದೆಯು ದಾವಾ ಸ್ವತ್ತಿನಲ್ಲಿ 29 ಗುಂಟೆ ಸ್ವತ್ತನ್ನು ವಾದಿಯ ತಂದೆಯಿಂದ 1974 ರಲ್ಲಿ ಖರೀದಿ ಮಾಡಿ ಅದರಂತೆ ಸ್ವಾಧೀನಾನುಭವದದಲ್ಲಿರುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ದನದ ಕೊಟ್ಟಿಗೆಯನ್ನು ನಿರ್ಮಾಣ ಮಾಡಿರುತ್ತಾರೆ. ಈ ಬಗ್ಗೆ ಪ್ರತಿವಾದಿಗಳು ನ್ಯಾಯಾಲಯಕ್ಕೆ ಭಾವ ಚಿತ್ರಗಳನ್ನು ಹಾಜರುಪಡಿಸಿರುತ್ತಾರೆ ಪ್ರತಿವಾದಿಗಳು ಹಾಜರುಪಡಿಸಿರುವ ದಿನಾಂಕಃ15.05.1974 ರ ಕ್ರಯ ಪತ್ರದಲ್ಲಿ ನಮೂದಿರುವ ಚಕ್ಕು ಬಂದಿ ಮತ್ತು ವಾದ ಪತ್ರದಲ್ಲಿ ನಮೂದು ಮಾಡಿರುವ ಚಕ್ಕು ಬಂದಿಗಳ ನಡುವೆ ಹೋಲಿಕೆಯಿರುತ್ತದೆ. ಇದನ್ನು ಪರಿಶೀಲಿಸಿದಾಗ 1 ಮತ್ತು 3 ನೇ ಪ್ರತಿವಾದಿಗಳು ಸ್ವಾಧೀನದಲ್ಲಿರುವುದು ಸ್ಪಷ್ಟವಾಗುತ್ತದೆ. ಆದರೂ ಸಹ ವಾದಿಯು ಸುಳ್ಳು ದಾವೆ ಮತ್ತು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಾದಿಯು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾ ಗೊಳಿಸಬೇಕೆಂದು ಕೋರಿರುತ್ತಾರೆ.

10. ವಾದಿಯು ಈ ಮಧ್ಯಂತರ ಅರ್ಜಿಯ ಜೊತೆಗೆ ಹಲವು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು ಪರಿಶೀಲಿಸಿದಾಗ, ಸರ್ವೇ ನಂ.119/1 ಕ್ಕೆ ಸಂಬಂಧಿಸಿದಂತೆ ಮೂರು ಗಣಕೀಕೃತ ಪಹಣಿಗಳು, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಆರು ಕೈ ಬರವಣಿಗೆ ಪಹಣಿಗಳು, ದಿನಾಂಕಃ13.02.1975 ರ ಆಧಾರ ಪತ್ರದ ನಕಲು ಪ್ರತಿ ವಾದಿಯ ಆಧಾರ್ ಕಾರ್ಡಿನ ನಕಲು ಪ್ರತಿ ಮತ್ತು ದಾವಾ ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತಾರೆ

KARN220019112023

11. ಪ್ರತಿವಾದಿ 1 ಮತ್ತು 3 ರವರು ದಾಖಲಾತಿಯ ಪಟ್ಟಿಯ ಜೊತೆಗೆ ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪರಿಶೀಲಿಸಿದಾಗ, ದಿನಾಂಕಃ15.05.1974 ರ ಕ್ರಯ ಪತ್ರದ ನಕಲು ಪ್ರತಿ ಸರ್ವೇ ನಂ.119/1 ಕ್ಕೆ ಸಂಬಂಧಿಸಿದಂತೆ ಆರು ಕೈ ಬರವಣಿಗೆ ಪಹಣಿಗಳು ಮತ್ತು 8 ಗಣಕೀಕೃತ ಪಹಣಿಗಳು ಮತ್ತು ಛಾಯಾ ಚಿತ್ರ ಗಳನ್ನು ಹಾಜರುಪಡಿಸಿರುತ್ತಾರೆ

12. ಈ ಹಂತದಲ್ಲಿ ದಾವೆಯ ಗುಣಾವಗುಣಗಳ ಬಗ್ಗೆ ಚರ್ಚಿಸಲು ಸಾಧ್ಯವಿರುವುದಿಲ್ಲ. ಕೇವಲ ದಾವೆಯು ಮೇಲ್ನೋಟಕ್ಕೆ ವಾದಿಯ ಪರವಾಗಿದೆಯೇ, ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ ಮತ್ತು ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆಯೇ ಎಂಬುದನ್ನು ಮಾತ್ರ ಪರಿಗಣಿಸಬೇಕಾಗಿರುತ್ತದೆ ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಭಂಧಕಾಜ್ಞೆಯ ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆ.

13. ವಾದಿಯ ಪ್ರಕಾರವಾಗಿ ನೋಡುವುದಾದರೆ, ವಾದಿಯು ದಾವಾ ಸ್ವತ್ತನ್ನು ದಿನಾಂಕಃ13.02.1975 ರ ಆಧಾರ ಪತ್ರದ ಆಧಾರದ ಮೇಲೆ ಮಾಲೀಕತ್ವ ಮತ್ತು ಸ್ವಾಧೀನವನ್ನು ಹೊಂದಿರುತ್ತಾರೆ ಎಂಬುದಾಗಿರುತ್ತದೆ. ಈ ಬಗ್ಗೆ ವಾದಿಯು ಹಾಜರುಪಡಿಸಿರುವ ಸದರಿ ಆಧಾರ ಪತ್ರದ ನಕಲು ಪ್ರತಿಯನ್ನು ಪರಿಶೀಲಿಸಿದಾಗ, ಚಿಕ್ಕೈದೇಗೌಡನ ಮಗನಾದ ತಮ್ಮಣ್ಣನವರು ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳನ್ನು ವಾದಿಗೆ ಆಧಾರ ಮಾಡಿರುವ ಬಗ್ಗೆ ಇರುತ್ತದೆ. ಸದರಿ ದಾಖಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಕೇವಲ ಸದರಿ ಸ್ವತ್ತುಗಳನ್ನು ಆಧಾರ ಮಾಡಿರುವ ಬಗ್ಗೆ ಮಾತ್ರ ನಮೂದಿದ್ದು, ಸ್ವಾಧೀನವನ್ನು ವಾದಿಗೆ ಬಿಟ್ಟು ಕೊಟ್ಟಿರುವ ಬಗ್ಗೆ ನಮೂದಿರುವುದಿಲ್ಲ. ಅದೇ ರೀತಿ ಆಧಾರದ ಪತ್ರದ ಮೇಲೆ ವಾದಿಗೆ ಹಕ್ಕು ಬರಲು ಹೇಗೆ ಸಾಧ್ಯ ಎಂಬುವ ಪ್ರಶ್ನೆ ಈ ಹಂತದಲ್ಲಿ ಉದ್ಭವವಾಗುತ್ತದೆ. ಕೇವಲ ಖಾತೆಯ ದಾಖಲೆಯನ್ನು ನೋಡಿ ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ನಿರ್ಣಯಕ್ಕೆ ಬರಲು ಸಾಧ್ಯವಿರುವುದಿಲ್ಲ.

14. 1 ಮತ್ತು 3 ನೇ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತಿನ ಸರ್ವೇ ನಂಬರಿನಲ್ಲಿ 29 ಗುಂಟೆ ಸ್ವತ್ತನ್ನು 1 ನೇ ಪ್ರತಿವಾದಿಯ ತಂದೆಯಾದ ಮರೀಗೌಡ ಮತ್ತು 3 ನೇ ಪ್ರತಿವಾದಿಯ ತಂದೆಯಾದ ಚಿಟ್ಟೇಸಿದ್ದೇಗೌಡರವರು 1974 ರಲ್ಲಿ ಖರೀದಿ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರತಿವಾದಿಗಳು ದಿನಾಂಕಃ15.05.1974 ರ ಕ್ರಯ ಪತ್ರದ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿದಾಗ, 1 ಮತ್ತು 3 ನೇ ಪ್ರತಿವಾದಿಗಳ ತಂದೆಯರು ಸರ್ವೇ ನಂ.100/2 ಮತ್ತು 119/2 ರ ಸ್ವತ್ತುಗಳನ್ನು ಖರೀದಿ ಮಾಡಿರುವ ಬಗ್ಗೆ ಕಂಡುಬರುತ್ತದೆ. ಸದರಿ ದಾಖಲೆಯಲ್ಲಿ ಸರ್ವೇ ನಂ.119/2 ರ 29 ಗುಂಟೆಗೆ ಚಕ್ಕು ಬಂದಿಯನ್ನು ನಮೂದು ಮಾಡಿದ್ದು, ಸದರಿ ಸ್ವತ್ತಿಗೆ ಪೂರ್ವಕ್ಕೆ ಮರೀಗೌಡನ ಜಮೀನು, ಪಶ್ಚಿಮಕ್ಕೆ ನಮ್ಮಗಳ ಬಾಬ್ತು ಹೊಲ, ಉತ್ತರಕ್ಕೆ ಗ್ರಾಮ ಠಾಣಾ ಮತ್ತು ದಕ್ಷಿಣಕ್ಕೆ ರಾಮುರವರ ಜಮೀನು ಎಂದು ನಮೂದಿರುತ್ತದೆ. ಸದರಿ ಚಕ್ಕು ಬಂದಿಯು ವಾದ ಪತ್ರದಲ್ಲಿ ನಮೂದಿಸಿರುವ ದಾವಾ ಸ್ವತ್ತಿನ ಚಕ್ಕು ಬಂದಿಗೆ ಮೇಲ್ನೋಟಕ್ಕೆ ಹೋಲಿಕೆಯಾಗುವುದು ಕಂಡು ಬರುತ್ತದೆ. ಅದೇ ರೀತಿ ಸರ್ವೇ ನಂ.119/1 ರ ಸ್ವತ್ತಿಗೆ ಖಾತೆಯು ಮರೀಗೌಡ ಮತ್ತು ಚಿಟ್ಟೆ ಸಿದ್ದೇಗೌಡರ ಹೆಸರಿನಲ್ಲಿ ಜಂಟಿ ಖಾತೆಯಿರುವುದು ವಾದಿ ಮತ್ತು ಪ್ರತಿವಾದಿಗಳು ಹಾಜರುಪಡಿಸಿರುವ ಪಹಣಿಗಳಿಂದ ತಿಳಿದು ಬರುತ್ತದೆ.

15. ಪಕ್ಷಗಾರರು ಹಾಜರುಪಡಿಸಿರುವ ಪಹಣಿಗಳ ಪ್ರಕಾರ ಸರ್ವೇ ನಂ.119/1 ರಲ್ಲಿ ಒಟ್ಟು 3 ಎಕರೆ 5 ಗುಂಟೆ ಸ್ವತ್ತು ಇದ್ದು, ಸದರಿ ಒಟ್ಟು ವಿಸ್ತೀರ್ಣದಲ್ಲಿ ಯಾರು ಯಾವ ಚಕ್ಕು ಬಂದಿಯ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂಬುದಕ್ಕೆ ಸಂಬಂಧವಾಗಿ ಪಕ್ಷಗಾರರ ವಿಚಾರಣೆಯಾಗಬೇಕಾಗಿರುತ್ತದೆ. ಪ್ರತಿವಾದಿಗಳು ಹಾಜರುಪಡಿಸಿರುವ ಛಾಯಾ ಚಿತ್ರಗಳನ್ನು ಪರಿಶೀಲಿಸಿದಾಗ, ಈಗಾಗಲೇ ದನದ ಕೊಟ್ಟಿಗೆ ನಿರ್ಮಾಣ ಮಾಡಿರುವ ಬಗ್ಗೆ ಮೇಲ್ನೋಟಕ್ಕೆ ಕಂಡುಬರುತ್ತದೆ. ವಾದಿಯು ಹೇಳಿರುವ ಆಧಾರ ಪತ್ರದ ಪ್ರಕಾರ ಮೇಲ್ನೋಟಕ್ಕೆ ವಾದಿಗೆ ಯಾವುದೇ ಮಾಲೀಕತ್ವ ಬರದೇ ಇರುವುದು ಕಂಡುಬರುತ್ತದೆ. ಅದರೆ ವಾದಿಯ ಹೆಸರಿಗೆ ಹೇಗೆ ಖಾತೆ ಬದಲಾವಣೆಯಾಗಿದೆ ಎಂಬ ಬಗ್ಗೆ ನೋಡಬೇಕಾದರೆ ಪಕ್ಷಗಾರರ ವಿಚಾರಣೆಯಾಗಬೇಕಾಗಿರುತ್ತದೆ. ಈ ಹಂತದಲ್ಲಿ ವಾದಿಯು ದಾವಾ ಸ್ವತ್ತಿನಲ್ಲಿ

KARN220019112023

ಸ್ವಾಧೀನಾನುಭವದಲ್ಲಿರುತ್ತಾರೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿರುವುದಿಲ್ಲ. ಮೇಲ್ನೋಟಕ್ಕೆ ನೋಡುವುದಾದರೆ, ಈ ದಾವೆಯು ವಾದಿಯ ಪರವಾಗಿ ಇಲ್ಲದೇ ಇರುವುದು, ಅನುಕೂಲತೆಯ ಒಲವು ವಾದಿಯ ಪರವಾಗಿ ಇಲ್ಲದೇ ಇರುವುದು ಮತ್ತು ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗೆ ಯಾವುದೇ ನಷ್ಟವುಂಟಾಗುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಆದ್ದರಿಂದ ವಾದಿಯು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯು ಊರ್ಜಿತವಾಗಿರುವುದಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು ಅಂಶ ಸಂಖ್ಯೆ:**1** ರಿಂದ **3** ಅನ್ನು ನಕಾರಾತ್ಮಕವಾಗಿ ಉತ್ತರಿಸಿದೆ.

16. <u>ಅಂಶ ಸಂಖ್ಯೆ:4ಃ-</u> ಈ ಮೇಲ್ಕಂಡ 1 ರಿಂದ 3 ನೇ ಅಂಶಗಳಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## <u>ಆದೇಶ</u>

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **-39** ನಿಯಮ **1** ಮತ್ತು **2** ರಂತೆ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:**1** ನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2023** ನೇ ಇಸವಿ ಆಗಸ್ಟ್ **16** ನೇ ದಿನಾಂಕದಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

Sd/-
(ಮಹೇಂದ್ರ ಎಂ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್? ಸಿ., ಚನ್ನಪಟ್ಟಣ.

KARN220019112023

<u>ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ</u>
<u>(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)</u>

**<u>ಆದೇಶ</u>**

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ39 ನಿಯಮ 1 ಮತ್ತು 2 ರಂತೆ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ1 ನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

**Sd/-**
(ಮಹೇಂದ್ರ ಎಂ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ. ಎಫ್?ಸಿ., ಚನ್ನಪಟ್ಟಣ.